ಜಿ.ಎಸ್. ಜಯದೇವ

# ಮಸಣಮ್ಮನ ಮಹಾರಾಜರ ನೆನಪುಗಳು

ಬೇಸಿಗೆಯ ಧಗೆ; ಉಗಾದಿ ಕಳೆದು ವಾರವೇ ಆಯಿತು. ಚಾಮರಾಜನಗರಕ್ಕಂತೂ ಮಳೆ ಇಲ್ಲ, ಹೋಗಲಿ ಬಿಳಿಗಿರಿರಂಗನ ಬೆಟ್ಟಕ್ಕಾದರೂ ಮಳೆ ಬರಬೇಡವೆ? ಕಾಡಿಗೂ ನಾಡಿಗೂ ಅಂಥಾ ವ್ಯತ್ಯಾಸವೇ ಇಲ್ಲದ ಹಾಗೆ ಬಿಸಿಲಧಗೆ ಉರಿಯುತ್ತಿತ್ತು. ಆದರೆ ನಾವು ಇದಾವುದನ್ನೂ ಲೆಕ್ಕಿಸದೆ ಬೆಟ್ಟ ಏರಿ ಬಿಳಿಗಿರಿಬನದ ಕೇತೇದೇವರ ಗುಡಿ ಅಥವ ಕೆ. ಗುಡಿಗೆ ಬಂದೆವು. ಸೋಲಿಗರು ಇದನ್ನು ಗುಡಿಹಟ್ಟಿ ಎನ್ನುತ್ತಾರೆ. ನಮ್ಮ ಉದ್ದೇಶ – ಕೇತೇದೇವರ ಗುಡಿಯಿಂದ ಐದಾರು ಮೈಲಿ ದೂರವಿರುವ ಕನ್ನೇರಿ ಕಾಲೋನಿಗೆ ಹೋಗಿ ಬಂಗಲಿ ರಂಗೇಗೌಡನ ಹೆಂಡತಿ ಮಸಣಮ್ಮನನ್ನು ಮಾತನಾಡಿಸುವುದು; ಬೇಟೆಗೆಂದು ಬೆಟ್ಟಕ್ಕೆ ಬರುತ್ತಿದ್ದ ಮಹಾರಾಜ ಜಯಚಾಮರಾಜೇಂದ್ರ ಒಡೆಯರ್ ಅವರ ವಿಷಯವನ್ನು ಅವಳಿಂದ ಕೇಳಿ ತಿಳಿದುಕೊಳ್ಳುವುದು. ಮೈಸೂರರಸರ ವಿಷಯ ಈ ಕಾಡ ಸೋಲಿಗರ ಅಜ್ಜಿಗೆ ಏನು ಗೊತ್ತು ಎಂದು ನೀವು ಮೂಗು ಮುರಿಯಬಹುದು. ಆದರೆ

